# ಮುಧೋಳ ಹೌಂಡ್

## ರಕ್ಷಣಾ ಪಡೆಗಳ ಮಿಂಚು



ಮುಧೋಳ ಬೇಟೆನಾಯಿ (ಹೌಂಡ್) ಸಿಂಹಕಟಿ ಇರುವ ನೀಳ ಕಾಲುಗಳ ಸಪೂರ ತಳಿಯ ನಾಯಿ. ತನ್ನ ಆಕ್ರಮಣಕಾರಿ ಕೌಶಲ ಹಾಗೂ ಸಾಕಿದವರಿಗೆ ತೋರುವ ನಿಷ್ಠೆಯಿಂದಾಗಿ ಹೆಸರುವಾಸಿ. ಬಾಗಲಕೋಟೆಯ ಮುಧೋಳ ತಳಿಯ ಈ ನಾಯಿಗಳು ಇದೀಗ ಸೇನಾಪಡೆಯಲ್ಲಿ ತಮ್ಮ ಛಾಪು ಮೂಡಿಸುತ್ತಿವೆ.

■ ಬಸವರಾಜ ಹವಾಲ್ದಾರ

ತೆಳುವಾದ ಶರೀರ, ಬಲಿಷ್ಠ ಸ್ನಾಯುಗಳು, ತೀಕ್ಷ್ಣ ಕಣ್ಣು, ಅಗಲವಾದ ತಲೆಬುರುಡೆ, ಚೂಪಾದ ಹಲ್ಲು, ಆಳವಾದ ಎದೆ, ನೀಳವಾದ ಕಾಲು, ಉದ್ದ ಬಾಲ... ಇವು ಮುಧೋಳ ಹೌಂಡ್ (ಮುಧೋಳ ಶ್ವಾನ) ಲಕ್ಷಣಗಳು. ಭಾರತೀಯ ಸೇನೆ, ಸಶಸ್ತ್ರ ಸೀಮಾಬಲ (ಎಸ್‌ಎಸ್‌ಬಿ), ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಇಂಡೊ–ಟಿಬೆಟಿಯನ್ ಬಾರ್ಡರ್ ಪೊಲೀಸ್ (ಐಟಿಬಿಪಿ), ಗಡಿ ಭದ್ರತಾ ಪಡೆ (ಬಿಎಸ್‌ಎಫ್), ಕೇರಳ ಹಾಗೂ ಕರ್ನಾಟಕ ಪೊಲೀಸ್ ಪಡೆ, ಒಡಿಶಾ ಸಿಐಡಿ ತಂಡ, ರಾಜಸ್ಥಾನ ಭದ್ರತಾ ಪಡೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಪತ್ತೇದಾರಿ ಕಾರ್ಯದಲ್ಲಿ ಮುಂಚೂಣಿಯಲ್ಲಿ ನಿಲ್ಲುವ ಮೂಲಕ ಮುಧೋಳದ ಹೆಸರನ್ನು ದೇಶದೆಲ್ಲೆಡೆ ಪಸರಿಸಿವೆ.

2018ರಲ್ಲಿ ಮುಧೋಳ ತಳಿಯ 9 ನಾಯಿಗಳನ್ನು ಮಿಲಿಟರಿ ಭದ್ರತಾ ಪಡೆ ಸಿಬ್ಬಂದಿ ತೆಗೆದುಕೊಂಡು ಹೋಗಿದ್ದರು. ಅಲ್ಲಿಂದ ಆರಂಭವಾದ ಮುಧೋಳ ಶ್ವಾನಗಳ ಯಾನ ವರ್ಷದಿಂದ ವರ್ಷಕ್ಕೆ ವಿಸ್ತರಿಸುತ್ತಲೇ ಇದೆ. ಪತ್ತೇದಾರಿ ಕಾರ್ಯಕ್ಕಾಗಿ ಇವುಗಳನ್ನೇ ಬಳಸಲಾಗುತ್ತಿದೆ. ಅವುಗಳ ಚುರುಕುತನ, ವಿವಿಧ ಹವಾಮಾನದಲ್ಲಿ ಹೊಂದಿಕೊಳ್ಳುವುದರಿಂದ ಇತ್ತೀಚಿನ ದಿನಗಳಲ್ಲಿ ತನಿಖಾ ಕಾರ್ಯದಲ್ಲಿ ಮೊದಲ ಆದ್ಯತೆ ಪಡೆದಿವೆ.

ಬಂಡೀಪುರ ಹುಲಿ ಯೋಜನೆ ವ್ಯಾಪ್ತಿಯ ಅರಣ್ಯದಲ್ಲಿ ಪ್ರಾಣಿಬೇಟೆ, ಕಳ್ಳಸಾಗಾಣಿಕೆ ತಡೆಯುವ ದಿಸೆಯಲ್ಲೂ ಈ ತಳಿಗಳನ್ನು ಬಳಸಲಾಗುತ್ತಿದೆ. ದೂರಸಂಪರ್ಕ ಇಲಾಖೆಯು ಭಾರತೀಯ ಶ್ವಾನ ಪರಂಪರೆ ಸಂಭ್ರಮಿಸಲು ಹದಿನೈದು ವರ್ಷಗಳ ಹಿಂದೆಯೇ ನಾಲ್ಕು ದೇಸಿ ಶ್ವಾನ ತಳಿಗಳ ಅಂಚೆ ಚೀಟಿಗಳನ್ನು ಹೊರತಂದಿದ್ದು, ಇದರಲ್ಲಿ ಮುಧೋಳ ತಳಿಯೂ ಒಂದಾಗಿದೆ.

ಭಾರತೀಯ ರಾಷ್ಟ್ರೀಯ ಶ್ವಾನ ಸಂಸ್ಥೆಯಿಂದ 'ಮುಧೋಳ ಹೌಂಡ್' ತಳಿ ಎಂದು ಮನ್ನಣೆ

### ಮೊಘಲ್ ರಾಜರ ಬೇಟೆನಾಯಿ

ಮುಧೋಳ ನಾಯಿಯಂತೆಯೇ ಉತ್ತರ ಪ್ರದೇಶದ ರಾಮ್‌ಪುರ ತಳಿ ಕೂಡ 'ರಾಮ್‌ಪುರ ಹೌಂಡ್' ಎಂದೇ ಪ್ರಸಿದ್ಧವಾಗಿದೆ. ಮೊಘಲ್ ರಾಜರು ಈ ತಳಿಯ ನಾಯಿಗಳನ್ನು ಬೇಟೆಗೆ ಬಳಸುತ್ತಿದ್ದರು ಎಂದು ಹೇಳುತ್ತದೆ ಇತಿಹಾಸ. ರಾಜ್ಯದ ಮುಧೋಳ ಮಾದರಿಯ ಅಂಗ ರಚನೆಯ ರಾಮ್‌ಪುರ ಹೌಂಡ್ ಅನ್ನು ಕೇಂದ್ರ ಮೀಸಲು ಪೊಲೀಸ್ ಪಡೆಯಲ್ಲಿ ಅನೇಕ ವರ್ಷಗಳಿಂದ ಬಳಸುತ್ತಿದ್ದಾರೆ. ಸಾಕಿದ ಮಾಲೀಕನ ಜೊತೆ ಅತ್ಯಂತ ವಿಶ್ವಾಸ ಮತ್ತು ಪ್ರೀತಿಯನ್ನು ತೋರುವ ರಾಮ್‌ಪುರ ನಾಯಿಗೆ 14 ವರ್ಷಗಳ ಬದುಕಬಲ್ಲವು. ಉದ್ದನೆಯ ಕಾಲಿರುವ ಈ ನಾಯಿಗಳು ಅತ್ಯಂತ ವೇಗದಲ್ಲಿ ಓಡಬಲ್ಲವು.

